ಕಥೆ

# ನಡುವೆ ಸುಳಿವಾತ್ಮ



**ಜಿ.ಎಸ್. ಸುಶೀಲಾ ದೇವಿ ಆರ್. ರಾವ್**

ಕಲೆ: ಸೌಮ್ಯ ಪ್ರಭು ಕಲ್ಯಾಣ್‌ಕರ್

ಆಸ್ಪತ್ರೆಯ ಬಿಲ್ ಕಟ್ಟಿ ಡಾಕ್ಟರ್ ಹೇಳಿದ್ದ ಮೆಡಿಸಿನ್ ಕೊಂಡು ಡಿಸ್‌ಚಾರ್ಜ್ ಮಾಡಿಸಿ ಮೈತ್ರಿ ವಾರ್ಡಿಗೆ ಬಂದಾಗ ಅಮ್ಮ ಮುಳುಮುಳು ಅಳುತ್ತಿದ್ದಳು. ಅಪ್ಪ ಗಂಭೀರರಾಗಿದ್ದರು. ಮೈತ್ರಿಗೆ ರೇಗಿತು.

'ಅಮ್ಮ, ನಿಂಗೆ ಬಿ.ಪಿ. ಜಾಸ್ತಿಯಾಗಿದೆ. ತಲೆ ಕೆಡಿಸ್ಕೋಬೇಡ ಅಂತ ಹೇಳಿ ಹೇಳಿ ಸಾಕಾಯ್ತು. ಅಪ್ಪ ಹೃದಯದ ಬೈಪಾಸ್ ಸರ್ಜರಿಯಿಂದ ಚೇತರಿಸಿಕೊಳ್ತಾ ಇದ್ದಾರೆ. ಅವರಿಗೆ ಟೆನ್ಷನ್ ಕೂಡದು ಅಂತ ಡಾಕ್ಟರ್ ಹೇಳಿದ್ದಾರೆ. ಹೀಗಿದ್ದೂ ಇದೇನು ನಡೀತಾ ಇದೆ ಇಲ್ಲಿ?

'ರಾಜ ಬರ್ಲೇ ಇಲ್ವಲ್ಲೇ! ಯಾವತ್ತೂ ಕರೆದ ಕೂಡಲೇ ಧಾವಿಸಿ ಬರೋನು'.

'ನಿಜ. ಈಗವರ ಪರಿಸ್ಥಿತಿ ಹೇಗಿದೆ ಅಂತ ನಿಂಗೊತ್ತಲ್ವಾ? ಮಗಳು ಉಮಾಗೆ ಸಿಸೇರಿಯನ್ ಆಗಿದೆ. ಹೆರಿಗೆ ಆಗಿದ್ದೇ ಮೊನ್ನೆ. ಅವಳಿಜವಳಿ ಮಕ್ಕಳು. ಅವರ ಬೆಳವಣಿಗೆ ಸಾಲದೇ ಇನ್ಕುಬೇಟರ್‌ನಲ್ಲಿ ಇಟ್ಟಿದ್ದಾರೆ. ಬೀಗರು ಅವರ ಮನೇಲೇ ಇದ್ದಾರೆ. ಹೇಗೆ ಬರ್ತಾರೆ ಹೇಳು?'

ಅಪ್ಪ ಕ್ಷೀಣ ದನಿಯಲ್ಲಿ ಕೇಳಿದರು 'ಹೌದಾ? ಎಂತಹಾ ಮಕ್ಕಳು? ಗಂಡೋ ಹೆಣ್ಣೋ?'

'ಇಬ್ಬರೂ ಹೆಣ್ಣುಮಕ್ಕಳು ಅಪ್ಪ.'

'ಅಯ್ಯೋ, ಎರಡೂ ಹೆಣ್ಣೇ!!?'

ಮೈತ್ರಿಗೆ ಮೈಯೆಲ್ಲಾ ಪರಚಿದ ಅನುಭವ.

ಇವರಿಬ್ಬರಿಗೂ ಹೆಣ್ಣೆಂದರೆ ಅತೀವ ತಾತ್ಸಾರ. ಅದರ ಫಲ ಉಂಡೇ ಬೆಳೆದೆನಲ್ಲ... ಮನಸ್ಸು ಕಹಿಯಾಯಿತು. ಅಪ್ಪ-ಅಮ್ಮ ನನ್ನ ಮನೆಗಲ್ಲ... ಇದೇ ಊರ ಅವರ ಗೆಳೆಯರ ಮನೆಗೆ ಬಂದಿದ್ದರು. ನನಗೆ ಗೊತ್ತಾಗಿದ್ದೇ ಗೋಪಾಲ ಮಾವ 'ಮೈತ್ರಿ, ನಿಮ್ಮಪ್ಪ ನಮ್ಮನೇಲಿದ್ದಾರೆ. ಎದೆ ಹಿಡ್ಕೊಂಡು ಒದ್ದಾಡ್ತಿದ್ದಾರೆ. ಬೇಗ ಬಾಮ್ಮಾ' ಅಂತ ಫೋನ್ ಮಾಡಿದಾಗ.

ಕಾರಿನಲ್ಲಿ ಧಾವಿಸಿ ನಾರಾಯಣ ಹೃದಯಾಲಯಕ್ಕೆ ಸೇರಿಸಿದ್ದೆ. ಡಾಕ್ಟರ್, 'ಪರಿಸ್ಥಿತಿ ಸೀರಿಯಸ್ ಇದೆ. ಆದಷ್ಟು ಬೇಗ ಬೈಪಾಸ್ ಸರ್ಜರಿಯಾಗಬೇಕು' ಎಂದರು. ಹಣ ಹೊಂದಿಸಿ ಒಬ್ಬಳೇ ಓಡಾಡಿದ್ದೆ. ಪುಣ್ಯಕ್ಕೆ ಮಗನ ಶಾಲೆಗೆ ರಜೆ. ನನಗೂ ರಜೆ ಸಿಕ್ಕಿತು. ಊರಿಗೆ ಹೋಗಿದ್ದ ಗೌರಕ್ಕನನ್ನು ವಾಪಸ್ ಕರೆಸಿಕೊಂಡು ಮನೆ ನಿಭಾಯಿಸಿದ್ದೆ. ಆಪರೇಷನ್ ಮುಗಿದು ಅಪ್ಪನನ್ನು ವಾರ್ಡಿಗೆ ಶಿಫ್ಟ್ ಮಾಡಿದರು. ನಂತರವೇ ಇಬ್ಬರು ಹೆಣ್ಣುಮಕ್ಕಳು ಅವರ ಗಂಡಂದಿರೊಂದಿಗೆ ಬಂದು ನೋಡಿಕೊಂಡು ಹೋದರು. ನನ್ನ ಮನೆಗೆ ಬರದೇ.... ಅಮ್ಮನ ತಮ್ಮ ರಾಜಶೇಖರ ಮಾವ ಅಪ್ಪನ ನೆಚ್ಚಿನ ಭಂಟ...ರಾಮನಿಗೆ ಹನುಮಂತನಂತೆ ಇದ್ದವ ಅವರಿಗೂ ಬರಲಾಗಲಿಲ್ಲ.

ಡಿಸ್‌ಚಾರ್ಜ್ ಮಾಡುವಾಗ ಡಾಕ್ಟರ್ 'ಎರಡು ವಾರದಿಂದ ಸುಸ್ತು ಅಂದರೂ ತೋರಿಸದೆ ವಿಳಂಬ ಮಾಡಿದ್ದೀರಿ. ಇನ್ನೂ ಸ್ವಲ್ಪ ತಡ ಮಾಡಿದ್ದರೆ ಜೀವಕ್ಕೇ ಅಪಾಯ ಇತ್ತು' ಎಂದಾಗ ನಿಜಕ್ಕೂ ಗಾಬರಿಯಾಗಿತ್ತು.

ಅಮ್ಮ, 'ಎಲ್ಲ ಸರಿ ಹೋಗುತ್ತೆ. ಅದಕ್ಕೆಲ್ಲಾ ಆಸ್ಪತ್ರೆ ಏಕೆ? ಸುಮ್ನೇ ದುಡ್ಡು ದಂಡ ಅಂದಿದ್ರು ಕಣೇ' ಅಂತ ಹೇಳಿದಾಗ ಅಪ್ಪನ ಜಿಪುಣತನದ ನೆನಪಾಗಿ ಬೇಜಾರಾಗಿತ್ತು.

'ಅಮ್ಮಾ, ಡಿಸ್‌ಚಾರ್ಜ್ ಮಾಡಿದ್ದಾರೆ. ವಾರಕ್ಕೊಮ್ಮೆ ಬರಬೇಕಂತೆ. ಹಾಗೆ ಎರಡು ತಿಂಗಳು ಬನ್ನಿ ಅಂದಿದ್ದಾರೆ